

## ಸತ್ಯವಚನ

ಮಾರ್ವಾಡಿ ಭಕ್ತರು ಪರಮಹಂಸರಿಗಾಗಿ ಆಗಾಗ ಹಣ್ಣು ಹಂಪಲು, ಕಲ್ಲುಸಕ್ಕರೆ, ಸಿಹಿತಿಂಡಿ ಇವೇ ಮೊದಲಾದುವನ್ನು ತರುತ್ತಿದ್ದರು. ಆದರೆ ಅವರಿಗೆ ಅವನ್ನು ತಿನ್ನಲು ಬಹು ಮಟ್ಟಿಗೆ ಆಗುತ್ತಲೇ ಇರಲಿಲ್ಲ. ಅವರು ಹೇಳುತ್ತಿದ್ದರು : 'ಅವರು ಬಹಳವಾಗಿ ಸುಳ್ಳು ಹೇಳಿ ದುಡ್ಡು ಸಂಪಾದನೆ ಮಾಡುತ್ತಾರೆ. ಅವರು ತರುವುದನ್ನು ನನ್ನ ಕೈಯಲ್ಲಿ ತಿನ್ನಲಾಗುವುದಿಲ್ಲ' ಎಂದು. ಅವರು ಮಾರ್ವಾಡಿಗಳಿಗೆ ಹೇಳುತ್ತಿದ್ದರು : 'ನಾನಕ್ ಹೇಳಿದ್ದಾನೆ : "ಅಸಾಧುಗಳ ಅನ್ನ ತಿನ್ನಲು ನಾನು ಯತ್ನಿಸಿದಾಗ ಅದೆಲ್ಲಾ ರಕ್ತಮಯವಾಗಿ ಕಂಡಿತು" ಎಂಬುದಾಗಿ. ಸಾಧುಗಳಿಗೆ ಶುದ್ಧ ವಸ್ತುಗಳನ್ನು ಅರ್ಪಿಸಬೇಕು. ಮಿಥ್ಯಾಚಾರದಿಂದ ಅರ್ಜಿಸಿದ ವಸ್ತುಗಳನ್ನು ಅವರಿಗೆ ಕೊಡಬಾರದು. ಸತ್ಯಪಥಾವಲಂಬಿಯಾದರೆ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು. ಯಾವಾಗಲೂ ಆತನ ನಾಮವನ್ನು ಜಪಿಸುತ್ತಿರಬೇಕು. ಕೆಲಸದ ಸಮಯದಲ್ಲಿ ಕೂಡ ಮನಸ್ಸನ್ನು ಆತನ ಅಡಿದಾವರೆಗಳಲ್ಲಿ ನೆಲಸಿರುವಂತೆ ಮಾಡಬೇಕು.'

'ಶಿವನಾಥನನ್ನು ನೋಡಿದರೆ ನನಗೆ ಬಹಳ ಆನಂದವಾಗಿಬಿಡುತ್ತದೆ. ಭಕ್ತಿರಸದಲ್ಲಿ ಸದಾ ಮುಳುಗಿರುವಂತೆಯೇ ಆತ ಕಾಣುತ್ತಾನೆ. ಜೊತೆಗೆ ಯಾರನ್ನು ಅನೇಕರು ಗೌರವಿಸುತ್ತಾರೋ, ಕೊಂಡಾಡುತ್ತಾರೋ, ಅವರಲ್ಲಿ ಭಗವಂತನ ಶಕ್ತಿ ವಿಶೇಷವಾಗಿ ಸ್ವಲ್ಪ ಇದ್ದೇ ಇರಬೇಕು. ಆದರೆ ಆತನಲ್ಲಿ ಬಹಳ ದೊಡ್ಡ ದುರ್ಗುಣವಿದೆ—ಮಾತಿನಂತೆ ನಡೆದುಕೊಳ್ಳುವುದಿಲ್ಲ. ದಕ್ಷಿಣೇಶ್ವರಕ್ಕೆ ಬರುವೆನೆಂದು ಒಮ್ಮೆ ನನಗೆ ತಿಳಿಸಿದ್ದ. ಆದರೆ ಬರಲೂ ಇಲ್ಲ, ಅದರ ಸಂಬಂಧವಾಗಿ ಯಾವ ಸಮಾಚಾರವನ್ನು ಕಳುಹಿಸಲೂ ಇಲ್ಲ. ಇದು ಸರಿಯಲ್ಲ. ಸತ್ಯವಚನವೇ ಕಲಿಯುಗದ ತಪಸ್ಸು ಎಂಬ ಒಂದು ಹೇಳಿಕೆ ಇದೆ. ಸತ್ಯವನ್ನು ಬಲವಾಗಿ ಹಿಡಿದುಕೊಂಡಿದ್ದರೇನೇ ಭಗವಂತನ ದರ್ಶನ ದೊರೆಯುವುದು. ಸತ್ಯನಿಷ್ಠೆ ಇಲ್ಲದೆ ಇತ್ತು ಎಂದರೆ, ಕ್ರಮ ಕ್ರಮೇಣ ಇಹಪರ ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ. ಸರ್ವತೋಪಿನ ಕಡೆ ಹೋಗಿ ಬರುತ್ತೇನೆ ಎಂದು ಆಕಸ್ಮಿಕವಾಗಿ ನಾನು ಹೇಳಿಬಿಟ್ಟರೆ, ಅವಶ್ಯಕತೆ ಇಲ್ಲದಿದ್ದರೂ ಸತ್ಯನಿಷ್ಠೆ ಎಲ್ಲಿ ಕೈಬಿಟ್ಟು ಹೋಗಿಬಿಡುವುದೋ ಎಂದು ಹೆದರಿ, ಅಲ್ಲಿಗೆ ಸುಮ್ಮನೆಯಾದರೂ ಹೋಗಿ ಬರುತ್ತೇನೆ. ನನಗೆ ಭಗವತಿಯ ದರ್ಶನ ದೊರೆತ ನಂತರ ಕೈಯಲ್ಲಿ ಹೂವನ್ನು ತೆಗೆದುಕೊಂಡು ಪ್ರಾರ್ಥನೆ ಮಾಡಿದೆ :'ಹೇ ಭಗವತಿ, ಇಗೋ ತೆಗೆದುಕೊ ನಿನ್ನ ಜ್ಞಾನವನ್ನು, ಇಗೋ ತೆಗೆದುಕೊ ನಿನ್ನ ಅಜ್ಞಾನವನ್ನು, ನನಗೆ ಶುದ್ಧ ಭಕ್ತಿಯನ್ನು ಕೊಡು ತಾಯಿ. ಇಗೋ ತೆಗೆದುಕೊ ನಿನ್ನ ಶುಚಿಯನ್ನು, ಇಗೋ ತೆಗೆದುಕೊ ನಿನ್ನ ಅಶುಚಿಯನ್ನು, ನನಗೆ ಶುದ್ಧ ಭಕ್ತಿಯನ್ನು ಕರುಣಿಸು ತಾಯಿ. ಇಗೋ ತೆಗೆದುಕೊ ನಿನ್ನ ಕೆಟ್ಟದ್ದನ್ನು, ಇಗೋ ತೆಗೆದುಕೊ ನಿನ್ನ ಒಳ್ಳೆಯದನ್ನು ನನಗೆ ಶುದ್ಧ ಭಕ್ತಿಯನ್ನು ನೀಡು ತಾಯಿ. ಇಗೋ ತೆಗೆದುಕೊ ನಿನ್ನ ಪುಣ್ಯವನ್ನು, ಇಗೋ ತೆಗೆದುಕೊ ನಿನ್ನ ಪಾಪವನ್ನು, ನನಗೆ ಶುದ್ಧ ಭಕ್ತಿಯನ್ನು ಕರುಣಿಸು ತಾಯಿ.' ಇವುಗಳನ್ನೆಲ್ಲಾ ತೆಗೆದುಕೋ ಅಂತಲೇನೋ ಹೇಳಿದೆ, ಆದರೆ ಆಗ ಹೇಳಲಾಗಲಿಲ್ಲ: 'ಹೇ, ತಾಯಿ, ಇಗೋ ತೆಗೆದುಕೊ ನಿನ್ನ ಸತ್ಯವನ್ನು, ಇಗೋ ತೆಗೆದುಕೊ ನಿನ್ನ ಅಸತ್ಯವನ್ನು' ಭಗವತಿಯ ಪಾದಪದ್ಮಗಳಲ್ಲಿ ಎಲ್ಲವನ್ನೂ ಅರ್ಪಿಸಿಬಿಟ್ಟೆ. ಆದರೆ ಸತ್ಯವೊಂದನ್ನು ಮಾತ್ರ ಆಗಲಿಲ್ಲ.

ಒಬ್ಬ ಬಹಳವಾಗಿ ಸುಳ್ಳು ಹೇಳುತ್ತಿದ್ದ ; ಆದರೂ ತನಗೆ ಬ್ರಹ್ಮಜ್ಞಾನ ದೊರೆತಿದೆ ಎಂದು ಹೇಳಿಕೊಳ್ಳುತ್ತಿದ್ದ. ಆತನನ್ನು ಯಾರೊ ತರಾಟೆಗೆ ತೆಗೆದುಕೊಂಡಾಗ ಆತ ಹೇಳಿದ, 'ಹೀಗೇಕೆ ವರ್ತಿಸುತ್ತಿದ್ದೀರಿ? ಈ ಜಗತ್ತು ಸ್ವಪ್ನವತ್ ; ಎಲ್ಲವೂ ಮಿಥ್ಯವೇ ಆಗಿದ್ದರೆ ಸತ್ಯವಚನ ಮಾತ್ರ ಸತ್ಯವಾದುದಾಗಿ ಆಗುವುದೆ? ಮಿಥ್ಯವೂ ಮಿಥ್ಯಾ, ಸತ್ಯವೂ ಮಿಥ್ಯಾ!' ಅಂತ. (ಭಕ್ತರೆಲ್ಲಾ ನಗುತ್ತಿದ್ದಾರೆ.)

ಯಾರು ಪ್ರಾಪಂಚಿಕ ಕೆಲಸಗಳನ್ನು ಎಂದರೆ, ಆಫೀಸಿನಲ್ಲಿ, ವ್ಯಾಪಾರ ಇತ್ಯಾದಿಗಳನ್ನು ಮಾಡುತ್ತಾರೊ ಅವರೂ ಸತ್ಯವಾದಿಗಳಾಗಿರಬೇಕು. ಸತ್ಯವಚನವೇ ಕಲಿಯುಗದಲ್ಲಿ ತಪಸ್ಸು.

ಶ್ರೀರಾಮಕೃಷ್ಣ ವಚನವೇದ ದಿಂದ

ಒಮ್ಮೆ ಭಕ್ತನೆಂದು ಹೇಳಿಕೊಳ್ಳುತ್ತಿದ್ದ ಒಬ್ಬನ ಮನೆಗೆ ಒಬ್ಬ ವೃದ್ಧನಾದ ನಾಸ್ತಿಕ ಊಟಕ್ಕೆ ಬಂದ. ಅವನಿಗೆ ಊಟಬಡಿಸಿದರೆ ದೈವದ್ರೋಹವಾದೀತೆಂದು ಬಗೆದು ನಾಸ್ತಿಕನಿಗೆ ಊಟ ಕೊಡದೆ ಹೊರಗಟ್ಟಿದ. ತಾನು ದೇವರಿಗೆ ಪ್ರೀತಿಯಾದಂತಹ ಘನಕಾರ್ಯವನ್ನು ಮಾಡಿದೆನೆಂದು ಮನಸ್ಸಿನಲ್ಲೇ ಹಿಗ್ಗಿದ. ಆ ರಾತ್ರಿ ಕನಸಿನಲ್ಲಿ ಅವನ ಮನೆದೇವರು ಗೋಚರಿಸಿ 'ಅಯ್ಯಾ, ನಿನ್ನ ಮನೆಗೆ ಬಂದಿದ್ದವನಿಗೆ ನಾನು ಕಳೆದ ೭೦ ವರ್ಷಗಳಿಂದ ಹೊಟ್ಟೆಗೆ ಅನ್ನ ಹಾಕಿದೆ. ಒಂದು ಹೊತ್ತಿನ ಭೋಜನಕ್ಕಾಗಿ ಅವನನ್ನು ನಿನ್ನ ಬಳಿ ಕಳುಹಿಸಿದರೆ, ನೀನು ಅಷ್ಟೂ ಮಾಡದೆ ಆ ಬಂದವನ ಹೊರೆಯನ್ನೂ ನನ್ನ ಮೇಲೆ ಹಾಕಿದೆ ! ನಾನು ಅವನಿಗೆ ಊಟ ಕೊಡದಿದ್ದರೆ ಅವನು ಇಷ್ಟು ವರ್ಷ ಬದುಕಿರುತ್ತಿದ್ದನೇ ಎಂಬ ವಿವೇಕವೂ ನಿನಗಿಲ್ಲವೆ' ಎಂದು ಮೂದಲಿಸಿದ.

ಮೂಲ : ಭಕ್ತಿ ಸೌರಭ (ತೆಲುಗು ಮೂಲದ ಕನ್ನಡ ಅನುವಾದ : ಎಮ್.ಆರ್. ವಿಶ್ವನಾಥ ರೆಡ್ಡಿ)